ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ದೇವರಾಜ ಅರಸ್ ಮಾರ್ಕೆಟ್, ಹಾಸನ. ☎ 264825

ವಾರ್ಷಿಕ ಬಡ್ಡಿ ದರದ ವಿವರಗಳು	ಸಾಮಾನ್ಯರಿಗೆ %	ಹಿರಿಯ ನಾಗರೀಕರಿಗೆ %
* 1 ವರ್ಷದಿಂದ 3 ವರ್ಷಗಳವರೆಗೆ	10.5	11
* 181ದಿನಗಳಿಂದ 365 ದಿನಗಳವರೆಗೆ	8	8.5
* 91 ದಿನಗಳಿಂದ 180 ದಿನಗಳವರೆಗೆ	7	7.5
* 31 ದಿನಗಳಿಂದ 90 ದಿನಗಳವರೆಗೆ	6	6.5
* 90 ತಿಂಗಳುಗಳಲ್ಲಿ ಠೇವಣಿ ಮೊತ್ತ ದ್ವಿಗುಣ		

-ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಜನತಾ ಮಾಧ್ಯಮ

ಸಂಪಾದಕ : ಆರ್.ಪಿ.ವೆಂಕಟೇಶಮೂರ್ತಿ   ವ್ಯವಸ್ಥಾಪಕ ಸಂಪಾದಕ :ಎಸ್.ಎನ್.ಮಂಜುನಾಥದತ್ತ

ಜನತಾಮಾಧ್ಯಮ ಬೆಳಗಿನ ದೈನಿಕ | JANATHAMADHYAMA | KARKAN. RNI 41566. | ಸಂಪುಟ : 41 | ಸಂಚಿಕೆ :78 | ಶುಕ್ರವಾರ ಫೆ.9, 2018 | ದೂರವಾಣಿ : 268494 | ಪುಟ-4 | ರೂ.2-00 | NO. HSN-761/ 2018-20

PREMIER MARKETING
#817/A,Opp: Mallige Residency,Govt.High School Field,Road,Hassan.
Ph:9620621333
9448742971
9844090035
08172-233509
Dr.Aquaguard
RO+UV+TDS Controller Water Purifier & Water Softner



ಜೈನಕಾಶಿಯೆಲ್ಲೆಡೆ ಸಂಭ್ರಮವೋ ಸಂಭ್ರಮ!



ಶ್ರವಣಬೆಳಗೊಳ : ಮಂದಸ್ಮಿತನ ಮಹಾ ಮಜ್ಜನದ ಸಂಬಂಧ ಪಂಚಕಲ್ಯಾಣ ಪ್ರತಿಷ್ಠಾಪನಾ ಮಹೋತ್ಸವ ಆರಂಭಗೊಂಡಿದ್ದು, ಸಹಸ್ರಾರು ಭಕ್ತರು ಪ್ರತಿಷ್ಠಾಪನಾ ಮಹೋತ್ಸವ ಸಾಕ್ಷೀಕರಿಸಿದರು. ಗುರುವಾರವೂ ಭಕ್ತರು ಮಹೋತ್ಸವದಲ್ಲಿ ಪಾಲ್ಗೊಂಡು ಭಕ್ತಿ ಭಾವ ಮೆರೆದರು.

ಜೈನರ ಕಾಶಿಯಲ್ಲೀಗ ಎಲ್ಲೆಡೆಯೂ ಸಂಭ್ರಮವೋ ಸಂಭ್ರಮ. ಸಡಗರ, ಉತ್ಸಾಹದಿಂದ ಜನರು ಇದ್ದಾರೆ. ಒಟ್ಟಾರೆ ಶ್ರವಣಬೆಳಗೊಳಕ್ಕೆ ವಿಶೇಷ ಕಳೆ ಬಂದಿದೆ. ರಾತ್ರಿಯ ವೇಳೆ ಝಗಮಗಿಸುವ ವಿದ್ಯುತ್ ದೀಪಗಳು ಬೆಳಗೊಳದ ಅಂದವನ್ನು ಹೆಚ್ಚಿಸಿವೆ.

ಗುರುವಾರ ಸಂಜೆ ಪಂಚಕಲ್ಯಾಣಗಳಲ್ಲಿ ದೇವೇಂದ್ರ ಸಭೆ, 16 ಸ್ವಪ್ನಗಳ ದರ್ಶನ ನಡೆಯಿತು. ಹಲವಾರು ಭಕ್ತರು ಇದರಲ್ಲಿ ಪಾಲ್ಗೊಂಡು ಕಣ್ತುಂಬಿಕೊಂಡರು.

ಬೆಳಗೊಳದ ರಸ್ತೆಗಳೀಗ ಶುದ್ಧವಾಗಿವೆ. ಪ್ಲಾಸ್ಟಿಕ್ ಮುಕ್ತ ಶ್ರವಣಬೆಳಗೊಳಕ್ಕೆ ಜಿಲ್ಲಾಡಳಿತ ಕ್ರಮ ಕೈಗೊಂಡಿದೆ. ಪ್ಲಾಸ್ಟಿಕ್ ವಸ್ತುಗಳ ಬಳಕೆ ನಿಷೇಧಿಸಲಾಗಿದೆ. ಪ್ಲಾಸ್ಟಿಕ್ ಬಾಟಲಿ ನೀರು ಬಳಕೆ ಇದ್ದರೂ, ಆ ಪ್ಲಾಸ್ಟಿಕ್‌ನ್ನು ಒಂದೆಡೆ ಸಂಗ್ರಹಿಸಿ ಮರು ಬಳಕೆಗೆ ಸಂಬಂಧಿಸಿದಂತೆ ಯೋಜನೆ ಕೂಡ ರೂಪಿಸಲಾಗಿದೆ.

ವಿಂಧ್ಯಗಿರಿಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಟ್ಟ ಹತ್ತಿ ಇಳಿಯುತ್ತಿರುವುದು ಸರ್ವೇಸಾಮಾನ್ಯವಾಗಿದೆ. ಇಲ್ಲಿಯ ಬಸದಿ ರಸ್ತೆಯ ಕೆಲ ನಿವಾಸಿಗಳು ನೀರಿನ ದಾಹ ತಣಿಸುತ್ತಿದ್ದಾರೆ. ಸ್ವಯಂ ಸೇವಕರು, ಶಾಲಾ ಕಾಲೇಜು ವಿದ್ಯಾರ್ಥಿಗಳು ಇವರಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ. ಊಟ, ತಿಂಡಿ ವಿಚಾರವೂ ಅಷ್ಟೇ. ಎಲ್ಲಿಯೂ ಲೋಪವಾಗದಂತೆ ಎಚ್ಚರ ವಹಿಸಲಾಗಿದೆ.

ಮಹಾ ಮಜ್ಜನದ ಸಮಾರೋಪದ ತನಕವೂ ಎಚ್ಚರ ವಹಿಸಲಾಗುವುದು. ಇದಕ್ಕಾಗಿ ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಮಹಾ ಮಸ್ತಕಾಭಿಷೇಕ ಸಮಿತಿಯ ಕಾರ್ಯಾಧ್ಯಕ್ಷರು ಮಾಹಿತಿ ನೀಡಿದರು.

ಮಹಾ ಮಸ್ತಕಾಭಿಷೇಕ ಮಹೋತ್ಸವ ಹಿನ್ನೆಲೆಯಲ್ಲಿ ಶ್ರವಣಬೆಳಗೊಳಕ್ಕೆ ಕಳೆ ನೀಡುತ್ತಿರುವ ಕಲಾ ತಂಡಗಳು.

ನಾಳೆ ಉಪ ರಾಷ್ಟ್ರಪತಿ ಆಗಮನ

ಉಪ ರಾಷ್ಟ್ರಪತಿ ವೆಂಕಯ್ಯನಾಯ್ಡು ಅವರು ಫೆ.10ರಂದು ಶ್ರವಣಬೆಳಗೊಳಕ್ಕೆ ಆಗಮಿಸಲಿದ್ದಾರೆ. ಅವರು ಅಂದು ನಡೆಯುವ ರಾಜ್ಯಾಭಿಷೇಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು

ಉಪರಾಷ್ಟ್ರಪತಿ ಆಗಮನದ ಹಿನ್ನೆಲೆಯಲ್ಲಿ ಗುರುವಾರ ಹಿರಿಯ ಪೊಲೀಸ್ ಅಧಿಕಾರಿಗಳು ಭದ್ರತೆ ಕುರಿತಂತೆ ಚರ್ಚೆ ನಡೆಸಿದ್ದಾರೆ. ಈ ಸಂಬಂಧ ಶ್ರವಣಬೆಳಗೊಳ ಮಠದ ಪೀಠಾಧ್ಯಕ್ಷ ಚಾರುಕೀರ್ತಿ ಭಟ್ಟಾರಕ ಶ್ರೀಗಳೊಂದಿಗೂ ಅವರು ಚರ್ಚೆ ನಡೆಸಿದ್ದಾರೆ.

ಪ್ರಥಮ ಮಹಾ ಮಸ್ತಕಾಭಿಷೇಕ ಫೆ.17ಕ್ಕೆ

ಪಂಚಕಲ್ಯಾಣ ಪ್ರತಿಷ್ಠಾಪನಾ ಮಹೋತ್ಸವ ಆರಂಭಗೊಂಡಿದೆ. ಫೆ.16ರವರೆಗೂ 9 ದಿನಗಳ ಕಾಲ ವಿವಿಧ ಆರಾಧನೆಗಳು ನಡೆಯಲಿವೆ. ಇದರ ನಂತರ ಫೆ.17ರಂದು ಶನಿವಾರ ಪ್ರಥಮ ಮಹಾ ಮಸ್ತಕಾಭಿಷೇಕ ನಡೆಯಲಿದೆ. 108 ಕಳಶಗಳೊಂದಿಗೆ ಬಾಹುಬಲಿ ಮೂರ್ತಿಗೆ ಅಭಿಷೇಕ ಮಾಡಲಾಗುವುದು. ದ್ವಿತೀಯ ಮಹಾ ಮಸ್ತಕಾಭಿಷೇಕ ಫೆ.18ರ ಭಾನುವಾರದಂದು 1008 ಕಳಸಗಳೊಂದಿಗೆ ನಡೆಯಲಿದೆ. ಫೆ.19ರಿಂದ 25ರವರೆಗೆ 7 ದಿನಗಳ ಕಾಲ ಪೂಜೆ ಮತ್ತು 1008 ಕಳಸ ಪ್ರತಿಷ್ಠಾಪನೆ ಜರುಗಲಿದೆ.

12 ಕೋಟಿಗೆ ಹರಾಜು!

ಪ್ರಥಮ ಮಹಾ ಮಸ್ತಕಾಭಿಷೇಕ ಫೆ.17ರ ಶನಿವಾರ 108 ಕಳಶಗಳೊಂದಿಗೆ ನಡೆಯಲಿದ್ದು, ಭಗವಾನ್ ಬಾಹುಬಲಿಗೆ ಅಭಿಷೇಕ ನಡೆಯಲಿದೆ.

12 ವರ್ಷಕ್ಕೊಮ್ಮೆ ಮಹಾ ಮಜ್ಜನ ನಡೆಯುತ್ತಿದ್ದು, ಭಕ್ತರೊಬ್ಬರು 12 ಕೋಟಿ ರೂ.ಗೆ ಹರಾಜು ಕೂಗಿದ್ದಾರೆ.

ತರುಣ್ ಸಾಗರ್ ಅವರ ಶಿಷ್ಯ ವರ್ಧಮಾನ್ ಮಹಾಸಾಗರ್ ಅವರು ಭಕ್ತರೊಬ್ಬರಿಗೆ 12 ಕೋಟಿ ರೂ. ಹರಾಜು ಕೂಗುವಂತೆ ಹೇಳಿದಾಗ, ಆ ಭಕ್ತರು ಅದಕ್ಕೆ ಒಪ್ಪಿಗೆ ನೀಡಿದ್ದಾರೆ.

ಉತ್ತರ ಭಾರತದ ಕಾಂಜಿ ಜೈನ್ ಅವರು 12 ಕೋಟಿ ರೂ. ನೀಡಿ ಪ್ರಥಮ ಮಹಾ ಮಸ್ತಕಾಭಿಷೇಕವನ್ನು ನೆರವೇರಿಸಲಿದ್ದಾರೆ ಎಂದು ಜೈನ ಮುಖಂಡರೊಬ್ಬರು ಪತ್ರಿಕೆಗೆ ತಿಳಿಸಿದರು.

ಅನ್ಯ ಧರ್ಮೀಯರೂ ಭಾಗಿ

ಶ್ರವಣಬೆಳಗೊಳದಲ್ಲಿ 88ನೇ ಮಹಾ ಮಸ್ತಕಾಭಿಷೇಕಕ್ಕೆ ಚಾಲನೆಯಂತೂ ದೊರೆತಿದೆ. ಬೆಳಗೊಳದಲ್ಲಿ ಜನರು ಇದನ್ನು ಹಬ್ಬದಂತೆ ಆಚರಿಸುತ್ತಿರುವುದನ್ನು ಇಲ್ಲಿ ಕಾಣಬಹುದು.

ಕೇವಲ ಜೈನ ಧರ್ಮೀಯರಲ್ಲ, ಇತರೆ ಧರ್ಮೀಯರೂ ಈ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿರುವುದು ವಿಶೇಷ.

ಮುಸ್ಲಿಂ ಸಮುದಾಯದ ಅಶ್ರಫ್ ಅವರು ಕಾಂತರಾಜಪುರದವರು. ಅವರು ಹೇಳುವ ಪ್ರಕಾರ, ಬಾಹುಬಲಿ ಮಸ್ತಕಾಭಿಷೇಕ ಕೇವಲ ಜೈನ ಧರ್ಮಕ್ಕೇ ಸೇರಿದ್ದಲ್ಲ. ನಾವೂ ಸೇರಿ ಅದನ್ನು ಮಾಡುತ್ತೇವೆ ಎನ್ನುತ್ತಾರೆ.

ಪ್ರವಾಸಿಗರ ದಂಡು

ಶ್ರವಣಬೆಳಗೊಳದಲ್ಲಿ ಗುರುವಾರ ಭಕ್ತರು ಹಾಗೂ ಪ್ರವಾಸಿಗರ ದಂಡೇ ಹರಿದಿತ್ತು. ವಿಂಧ್ಯಗಿರಿಯ ಸುತ್ತಮುತ್ತ ಪ್ರವಾಸಿಗರು ಸಂಭ್ರಮದಿಂದ ಓಡಾಡುತ್ತಿದ್ದಾರೆ.

ಈಗಾಗಲೇ ಶ್ರವಣಬೆಳಗೊಳಕ್ಕೆ ಸಹಸ್ರ ಸಹಸ್ರ ಜೈನ ಭಕ್ತರು ಆಗಮಿಸಿದ್ದು, ಪೂಜಾ ಕೈಂಕರ್ಯದಲ್ಲಿ ತೊಡಗಿಕೊಂಡಿದ್ದಾರೆ.

ಪಂಚಕಲ್ಯಾಣ ಪ್ರತಿಷ್ಠಾಪನಾ ಮಹೋತ್ಸವವನ್ನು ಬಹುತೇಕ ಭಕ್ತರು ಗುರುವಾರವೂ ಕೂಡ ಕಣ್ತುಂಬಿಕೊಂಡರು.

ಪ್ರವಾಸಿಗ ಉತ್ತರ ಕರ್ನಾಟಕದ ಬಿರಾದಾರ್ ಮಾತನಾಡಿ, ಇದೊಂದು ಅಪೂರ್ವ ಕ್ಷಣ. ಮಸ್ತಕಾಭಿಷೇಕ ಸಮಾರೋಪದ ತನಕವೂ ಇಲ್ಲಿಯೇ ಇರುತ್ತೇನೆ ಎಂದು ಹೇಳಿದರು.

ಚಾರುಕೀರ್ತಿ ಶ್ರೀಗಳಿಗೆ 4ನೇಯದ್ದು

ಶ್ರವಣಬೆಳಗೊಳ ಜೈನ ಮಠದ ಪೀಠಾಧಿಪತಿಗಳಾಗಿ ಈಗಿನ ಸ್ವಸ್ತಿಶ್ರೀ ಜಗದ್ಗುರು ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯ ಸ್ವಾಮಿಗಳು ಅಧಿಕಾರ ವಹಿಸಿಕೊಂಡ ನಂತರ ಅವರ ನೇತೃತ್ವದಲ್ಲಿ ನಡೆಯುತ್ತಿರುವ 4ನೇ ಮಹಾ ಮಸ್ತಕಾಭಿಷೇಕ ಇದು. ಪ್ರತಿ ಮಹಾಮಸ್ತಕಾಭಿಷೇಕ ನಡೆಸಿದಾಗಲೂ ಒಂದೊಂದು ಅನುಭವ. ಈ ಸಾರಿಯ ಮಹಾ ಮಸ್ತಕಾಭಿಷೇಕವನ್ನು ಯುದ್ಧ ಭೀತಿಯಿಂದ, ಭಯೋತ್ಪಾದನೆ ಭೀತಿಯಿಂದ ತತ್ತರಿಸುತ್ತಿರುವ ವಿಶ್ವಕ್ಕೆ ಶಾಂತಿ ಸಂದೇಶ ಸಾರಲು ಏರ್ಪಡಿಸಲಾಗುತ್ತಿದೆ. ಹೀಗಾಗಿ ಇದು ಒಂದು ಅಂತರರಾಷ್ಟ್ರೀಯ ಸಮಾರಂಭ ಎಂದು ಶ್ರೀಗಳು ಭಾವಿಸಿದ್ದಾರೆ. ಶ್ರೀಗಳ ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ 1981, 1993, 2006ರ ಮಹಾ ಮಸ್ತಕಾಭಿಷೇಕಗಳು ನಡೆದಿದ್ದು, ಇದೀಗ 2018ರ ಮಹಾ ಮಸ್ತಕಾಭಿಷೇಕ ನಡೆಯಲಿದೆ.

ನವೀಕರಣಗೊಂಡಿರುವ ಬಸ್ ನಿಲ್ದಾಣ

ವಿಶ್ವವಿಖ್ಯಾತ ಶ್ರವಣಬೆಳಗೊಳದಲ್ಲಿ ಉತ್ತಮ ಗುಣಮಟ್ಟದ ಬಸ್ ನಿಲ್ದಾಣ ನಿರ್ಮಾಣಗೊಂಡಿದೆ ಎಂದು ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಹೇಳಿದ್ದಾರೆ.

ಮಹಾಮಸ್ತಕಾಭಿಷೇಕ ಮಹೋತ್ಸವ ಸಂದರ್ಭದಲ್ಲಿ ನವೀಕರಣಗೊಂಡ ಶ್ರವಣಬೆಳಗೊಳ ಬಸ್ ನಿಲ್ದಾಣ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ ಉತ್ತಮ ಗುಣಮಟ್ಟದ ಹಾಗೂ ವ್ಯವಸ್ಥಿತವಾದ ಬಸ್ ನಿಲ್ದಾಣ ನವೀಕರಣಗೊಂಡಿದೆ ಎಂದರು.

(-4ನೇ ಪುಟಕ್ಕೆ)

ನಿರ್ವಾಣ ದೀಕ್ಷೆ : ತ್ಯಾಗಿಗಳು, ಮಾತಾಜಿಗಳ ಕಠಿಣ ವ್ರತಾಚರಣೆ

ಜೈನ ಧರ್ಮ ಈ ದೇಶದ ಅನಾದಿ ಧರ್ಮಗಳಲ್ಲಿ ಒಂದು. ಜೈನ ಧರ್ಮದಲ್ಲಿ ತ್ಯಾಗಿಗಳಿಗೆ ಮತ್ತು ಮಾತಾಜಿಗಳಿಗೆ ವಿಶೇಷ ಸ್ಥಾನವಿದೆ.

ಈಗ ಶ್ರವಣಬೆಳಗೊಳದಲ್ಲಿ 500ಕ್ಕೂ ಹೆಚ್ಚು ತ್ಯಾಗಿಗಳು, ಮಾತಾಜಿಗಳು ಇದ್ದಾರೆ. ದೇಶದ ವಿವಿಧೆಡೆಯಿಂದ ಕಾಲ್ನಡಿಗೆಯಿಂದಲೇ ಇವರುಗಳು ಬೆಳಗೊಳವನ್ನು ಪ್ರವೇಶಿಸಿದ್ದಾರೆ. ಬೆಳಗೊಳ ಪ್ರವೇಶ ಸಂದರ್ಭದಲ್ಲಿ ವಿಶೇಷ ಪೂಜಾ ವಿಧಿ ವಿಧಾನಗಳು ನಡೆದವು.

ಈ ಸಹಸ್ರಮಾನದ ಮೊದಲ ಮಸ್ತಕಾಭಿಷೇಕದ ವೇಳೆ ಅಂದರೆ 2006ರ ಮಹಾ ಮಜ್ಜನದ ಸಂದರ್ಭದಲ್ಲಿ ತರುಣ್ ಸಾಗರ್ ಪಾಲ್ಗೊಂಡಿದ್ದರು. ತರುಣ್ ಸಾಗರ್ ಅವರ ಪ್ರವಚನ ವಿಶೇಷವಾಗಿರುತ್ತಿತ್ತು. ಈಗ ತರುಣ್‌ಸಾಗರ್ ಅವರ ಶಿಷ್ಯ ವರ್ಧಮಾನ ಸಾಗರ್ ಅವರು ವಿಶೇಷ ಪ್ರವಚನವನ್ನು ನಡೆಸಲಿದ್ದಾರೆ.



ತ್ಯಾಗಿಗಳು ಹಾಗೂ ಮಾತಾಜಿಗಳಾಗಲು ಕಠಿಣ ವ್ರತಾಚಾರಣೆಯನ್ನು ಪಾಲಿಸಬೇಕು. ಇದು ಸಾಮಾನ್ಯವಾದುದಲ್ಲ. ಜೈನ ಧರ್ಮದ ಬಗ್ಗೆ ಆಳವಾದ ಅಧ್ಯಯನದ ಜೊತೆಗೆ ಸಾಕಾರಗಳನ್ನು ಅವರು ಕಂಡುಕೊಳ್ಳಬೇಕು.

ಶ್ರವಣಬೆಳಗೊಳದಲ್ಲಿ ಪತ್ರಿಕೆಯು ಜೈನ ಮುನಿಯೊಬ್ಬರನ್ನು ಸಂಪರ್ಕಿಸಿದಾಗ, ಅವರು ಮಾತನಾಡಲಿಲ್ಲ. ನಂತರ ಭಕ್ತರೊಬ್ಬರಿಂದ ಅವರ ವಿವರ ಪಡೆಯಲಾಯಿತು.

ತ್ಯಾಗಿಗಳು ಅಥವಾ ಮಾತಾಜಿಗಳಾಗುವವರು ಎಲ್ಲವನ್ನೂ ತ್ಯಜಿಸುತ್ತಾರೆ. ಅವರ ಆಹಾರ ಪದ್ಧತಿಯೂ ಅಷ್ಟೇ. ಅವರು ಸೇವಿಸುವ ಆಹಾರದಲ್ಲಿ ಉಪ್ಪು, ಖಾರ, ಹುಳಿ, ಈರುಳ್ಳಿ ಇದ್ಯಾವುದೂ ಇರುವುದಿಲ್ಲ. ಈ ಆಹಾರ ಪದ್ಧತಿಯಿಂದಲೇ ಅವರು ತಮ್ಮ ದೇಹವನ್ನು ಕೃಶಗೊಳಿಸುತ್ತಾರೆ.

ಜೈನ ಧರ್ಮದ ಪ್ರಕಾರ ಇಂಥ ತ್ಯಾಗಿಗಳಿಗೆ ನಿರ್ವಾಣ ದೀಕ್ಷೆ ಸ್ವಾಮೀಜಿ ಎಂದು ಹೇಳುತ್ತಾರೆ. ನಿರ್ವಾಣ ದೀಕ್ಷೆಗಿಂತ ಮೊದಲು ಬ್ರಹ್ಮಚರ್ಯ ದೀಕ್ಷೆ ಸಂಸ್ಕಾರ ದೊರೆಯುತ್ತದೆ. ನಂತರ ಕ್ಷುಲ್ಲಕ ದೀಕ್ಷೆಯನ್ನು ನೀಡಲಾಗುತ್ತದೆ. ತರುವಾಯ ನಿರ್ವಾಣ ದೀಕ್ಷೆ ನೀಡಲಾಗುವುದು.

ನೂರಾರು ಮಂದಿ ತ್ಯಾಗಿಗಳು ಬೆಳಗಿನ ಹೊತ್ತು ಮಾತ್ರ ಆಹಾರ ಸೇವಿಸುತ್ತಾರೆ. ಈ ತ್ಯಾಗಿಗಳು ಮನಸ್ಸಿನಲ್ಲಿ ಇಟ್ಟುಕೊಂಡ ಆಹಾರವು ಅಲ್ಲಿ ಕಾಣಸಿಕ್ಕರೆ ಮಾತ್ರ ಭಕ್ತರ ಕೈಯಿಂದ ಅದನ್ನು ಸ್ವೀಕರಿಸುತ್ತಾರೆ. ಇಲ್ಲದಿದ್ದಲ್ಲಿ ಇಡೀ ದಿವಸ ಉಪವಾಸ. ದಿನವೊಂದರಲ್ಲಿ ಆಹಾರ ಸೇವಿಸುವ ವೇಳೆ ಮಾತ್ರ ನೀರು ಕುಡಿಯುತ್ತಾರೆ ಎಂದು ಜೈನ ಸಮಾಜದ ಬಾಂಧವರು ವಿವರಿಸುತ್ತಾರೆ.

ಈ ತ್ಯಾಗಿಗಳು ಮತ್ತು ಮಾತಾಜಿಗಳು ಸ್ನಾನ ಮಾಡುವುದಿಲ್ಲ. ಹುಲ್ಲು, ಚಾಪೆಯ ಮೇಲೆ ಮಲಗುತ್ತಾರೆ. ಕಮಂಡಲದಲ್ಲಿ ಸ್ವಲ್ಪ ನೀರನ್ನು ತೆಗೆದುಕೊಂಡು ಮೈ ಒರೆಸಿಕೊಳ್ಳುತ್ತಾರೆ. ತಲೆ ಕೂದಲು ಹಾಗೂ ಗಡ್ಡವನ್ನು ಕಿತ್ತುಕೊಳ್ಳುತ್ತಾರೆ. ಇದಕ್ಕೆ ಲೋಚ ಎಂದು ಹೇಳುತ್ತಾರೆ.

ಜನರ ದಿಕ್ಕು ತಪ್ಪಿಸುವ ಕೆಲಸ : ವಿ.ಸೋಮಣ್ಣ ಆರೋಪ

ಹಾಸನ : ಮಠ ಮಾನ್ಯಗಳನ್ನು ಧಾರ್ಮಿಕ ದತ್ತಿ ಇಲಾಖೆ ಮೂಲಕ ತನ್ನ ವಶಕ್ಕೆ ತೆಗೆದುಕೊಳ್ಳಲು ಹೊರಟಿರುವ ರಾಜ್ಯ ಸರ್ಕಾರ, ಅಲ್ಪಸಂಖ್ಯಾತರ ಓಲೈಕೆಗೆ ಯತ್ನಿಸುತ್ತಿದೆ ಎಂದು ಮಾಜಿ ಸಚಿವ ಹಾಗೂ ಬಿಜೆಪಿ ಮುಖಂಡ ವಿ.ಸೋಮಣ್ಣ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಖಾಸಗಿ ಹೊಟೇಲೊಂದರಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ಜನರ ದಿಕ್ಕು ತಪ್ಪಿಸುವ ಕೆಲಸಕ್ಕೆ ಸಿ.ಎಂ. ಸಿದ್ದರಾಮಯ್ಯ ಕೈ ಹಾಕಿದ್ದಾರೆ ಎಂದು ಆರೋಪಿಸಿದರು.

ಚುನಾವಣೆಗೆ ಇನ್ನು ಬೆರಳೆಣಿಕೆ ದಿನವಿರುವ ಸಂದರ್ಭದಲ್ಲಿ ಸಿದ್ದರಾಮಯ್ಯ ಯಾವ ಪುರುಷಾರ್ಥಕ್ಕೆ ಈ ಕೆಲಸಕ್ಕೆ ಕೈ ಹಾಕಿದ್ದಾರೆಂದು ಪ್ರಶ್ನಿಸಿದ ಅವರು, ರಾಜ್ಯದ ಜನರು ಬೀದಿಯಲ್ಲಿ ನಿಂತು ಘರ್ಷಣೆ ಮಾಡುವ ವಾತಾವರಣವನ್ನು ಸಿದ್ದರಾಮಯ್ಯ ಸೃಷ್ಟಿಸುತ್ತಿದ್ದಾರೆಂದು ದೂರಿದರು. ಇದೇ ವೇಳೆ ಬಿಜೆಪಿ ಜಿಲ್ಲಾಧ್ಯಕ್ಷ ಯೋಗಾ ರಮೇಶ್ ಇದ್ದರು.

ಪಾರದರ್ಶಕ ಆಡಳಿತ : ಡಿಡಿಪಿಯು ವಾಮರಾಜ

ಹಾಸನ : ತಮ್ಮ ಅಧಿಕಾರವಧಿಯಲ್ಲಿ ಪಾರದರ್ಶಕ ಆಡಳಿತಕ್ಕೆ ಆದ್ಯತೆ ನೀಡುವುದಾಗಿ ನೂತನ ಡಿಡಿಪಿಯು ವಾಮರಾಜ ಅವರು ಹೇಳಿದರು.

ಪತ್ರಿಕೆಯೊಂದಿಗೆ ಗುರುವಾರ ಮಾತನಾಡಿದ ಅವರು, ಈ ಹಿಂದಿನ ಡಿಡಿಪಿಯುಗಳಂತೆ ತಾವೂ ಕೂಡ ಶೈಕ್ಷಣಿಕ ಗುಣಮಟ್ಟವನ್ನು ಇನ್ನಷ್ಟು ಉತ್ತಮಪಡಿಸಲಾಗುವುದು. ಸರ್ಕಾರ 1ನೇ ತರಗತಿಯಿಂದ 12ನೇ ತರಗತಿ ಒಂದೇ ಆಡಳಿತದ ಅಡಿ ಬರಬೇಕೆಂದು ಪ್ರಯತ್ನ ಮಾಡುತ್ತಿದೆ. ಒಂದು ವೇಳೆ ಹಾಗೇನಾದರೂ ಆದರೆ ಅದಕ್ಕೆ ಪೂರಕವಾಗಿ ತಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಕಾರ್ಯಕ್ರಮ ರೂಪಿಸಬೇಕು ಎಂಬುದರ ಬಗ್ಗೆ ಆಲೋಚಿಸಲಾಗುವುದು ಎಂದರು.

ಚನ್ನರಾಯಪಟ್ಟಣ ತಾಲ್ಲೂಕು ಹಿರೀಸಾವೆಯ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ 13 ವರ್ಷ ಪ್ರಾಂಶುಪಾಲರಾಗಿ ಹಾಗೂ ಹಳೇಬೀಡಿನ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ 23 ವರ್ಷಗಳ ಸುದೀರ್ಘ ಕಾಲ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದು, ತಮ್ಮ ಸೇವಾವಧಿಯನ್ನು ಹೆಚ್ಚು ಹಾಸನ ಜಿಲ್ಲೆಯಲ್ಲಿಯೇ ಕಳೆದಿದ್ದೇನೆ ಎಂದವರು ಹೇಳಿದರು.

ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲ್ಲೂಕು ದೇವನಸಮುದ್ರ ಗ್ರಾಮದ ಕೃಷಿ ಕುಟುಂಬದ ವಾಮರಾಜ ಅವರು ಗುರುವಾರ (ಫೆ.8) ಡಿಡಿಪಿಯು ಆಗಿ ಅಧಿಕಾರ ವಹಿಸಿಕೊಂಡಿದ್ದು, ತಮ್ಮ ಸೇವಾವಧಿ ಇನ್ನೂ 1 ವರ್ಷ 4 ತಿಂಗಳು ಇರುವುದಾಗಿ ತಿಳಿಸಿದರು.

> “ ಸರ್ಕಾರ 1ನೇ ತರಗತಿಯಿಂದ 12ನೇ ತರಗತಿ ಒಂದೇ ಆಡಳಿತದ ಅಡಿ ಬರಬೇಕೆಂದು ಪ್ರಯತ್ನ ಮಾಡುತ್ತಿದೆ. ಒಂದು ವೇಳೆ ಹಾಗೇನಾದರೂ ಆದರೆ ಅದಕ್ಕೆ ಪೂರಕವಾಗಿ ತಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಕಾರ್ಯಕ್ರಮ ರೂಪಿಸಬೇಕು ಎಂಬುದರ ಬಗ್ಗೆ ಆಲೋಚಿಸಲಾಗುವುದು.
>
> **-ವಾಮರಾಜ, ನೂತನ ಡಿಡಿಪಿಯು**

ಕಾಡಿಗೆ ಬೆಂಕಿ : ಈಗಲೇ ಎಚ್ಚರ ವಹಿಸಿ

ಹಾಸನ : ಬೇಸಿಗೆ ಶುರುವಾಗಿದೆ. ಜೊತೆಗೆ ಅರಣ್ಯಕ್ಕೆ ಬೆಂಕಿ ಇಡುವ ಕಿಡಿಗೇಡಿಗಳೂ ಹುಟ್ಟಿಕೊಂಡಿದ್ದಾರೆ. ನಾಗರಹೊಳೆ ಅರಣ್ಯಕ್ಕೆ ಕಿಡಿಗೇಡಿಯೊಬ್ಬ ಬೆಂಕಿ ಹಚ್ಚಿದ್ದರಿಂದಾಗಿ 17.5 ಎಕರೆಯಷ್ಟು ಅರಣ್ಯ ನಾಶವಾಗಿದೆ.

ಅರಣ್ಯ ಬೆಳೆಸುವುದು ತುಂಬಾ ಕಷ್ಟ. ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ ಎಂಬಂತೆ ನೂರಾರು ವರ್ಷಗಳಿಂದ ಬೆಳೆದು ನಿಂತ ಮರ, ಗಿಡಗಳನ್ನು ಬೆಂಕಿ ಇಟ್ಟು ನಾಶ ಮಾಡುವ ವಿಕೃತ ಮನಸ್ಸಿನ ವ್ಯಕ್ತಿಗಳ ಬಗ್ಗೆ ಎಚ್ಚರ ವಹಿಸಬೇಕಾದ ದಿನಗಳು ಎದುರಾಗಿವೆ.

ಕಳೆದ ವರ್ಷ ಸಕಲೇಶಪುರದ ಕಂಚಿನ ಕುಮರಿಯ ಪಶ್ಚಿಮ ಘಟ್ಟ ಅರಣ್ಯ ಪ್ರದೇಶದಲ್ಲಿ ಬೆಂಕಿ ತಗುಲಿ ಸುಮಾರು 50 ಎಕರೆಯಷ್ಟು ಅರಣ್ಯ ನಾಶವಾಗಿತ್ತು.

ಅರಣ್ಯಕ್ಕೆ ಬೆಂಕಿ ಬಿದ್ದರೆ ಬರೀ ಮರ-ಗಿಡಗಳಷ್ಟೇ ಅಲ್ಲ ಪ್ರಾಣಿ, ಪಕ್ಷಿಗಳು ಸುಟ್ಟು ಹೋಗುತ್ತವೆ. ಔಷಧಿಯುಕ್ತ ಸಸ್ಯಗಳು ನಶಿಸಿ ಹೋಗುತ್ತವೆ. ಈ ಬಗ್ಗೆ ಫೆಬ್ರವರಿಯಿಂದ ಜೂನ್ ತಿಂಗಳವರೆಗೂ ಎಚ್ಚರ ವಹಿಸುವುದು ಅಗತ್ಯ.

ಅರಣ್ಯ ಉಳಿವಿನ ಬಗ್ಗೆ ಜನರಲ್ಲಿ ಎಷ್ಟು ಜಾಗೃತಿ ಮೂಡಿಸಿದರೂ ಸಾಲದು. ಪ್ರತಿ ಗ್ರಾಮಗಳಲ್ಲಿ ಅರಣ್ಯ ಸಮಿತಿ ರಚಿಸಬೇಕು. ಎಲ್ಲಾ ಮಾಧ್ಯಮಗಳಲ್ಲೂ ಪ್ರಚಾರ ಮಾಡಬೇಕು. ರೇಡಿಯೋ ಬಳಸಿಕೊಳ್ಳಬೇಕು. ಅರಣ್ಯಕ್ಕೆ ಬೆಂಕಿ ಬಿದ್ದರೆ ನಮ್ಮ ಗಮನಕ್ಕೆ ತನ್ನಿ ಎಂಬ ಸೂಚನೆಯನ್ನು ಕೊಡಬೇಕು. ಜೋರು ಮಳೆ ಬರುವವರೆಗೂ ಎಚ್ಚರ ಅಗತ್ಯ. ಅರಣ್ಯ ಇಲಾಖೆಗೆ ಇದೆಲ್ಲ ಗೊತ್ತಿರುವ ವಿಚಾರವಾದರೂ ಬೇಸಿಗೆ ಕಳೆಯುವವರೆಗೆ ಕಟ್ಟೆಚ್ಚರದಿಂದ ಇರುವುದು ಕಾಡಿನ ಉಳಿವಿನ ದೃಷ್ಟಿಯಿಂದ ತುಂಬಾ ಮಹತ್ವದ್ದಾಗಿದೆ.

ಡಾ||ಉದಯಶಂಕರ ಬಾಬು ಜಿ.ಎಲ್.
ಎಂ.ಡಿ.(ಮೆಡಿಸಿನ್)
ಕನ್ಸಲ್ಟೆಂಟ್ ಫಿಸಿಷಿಯನ್
(ಫಾರ್ಮರ್ ಅಸಿಸ್ಟೆಂಟ್ ಪ್ರೊಫೆಸರ್ ಆಫ್ ಮೆಡಿಸಿನ್,ಕೆ.ಎಂ.ಸಿ. ಆಸ್ಪತ್ರೆ, ಮಣಿಪಾಲ್)
ಹೇಮಾವತಿ ಆಸ್ಪತ್ರೆಯಲ್ಲಿ ವೈದ್ಯರಾಗಿದ್ದ ಇವರು ಇನ್ನು ಮುಂದೆ ಈ ಕೆಳಕಂಡ ವಿಳಾಸದಲ್ಲಿ ಲಭ್ಯರಿರುತ್ತಾರೆ.
ಸಂದರ್ಶನದ ಸಮಯ:
ಬೆಳಗ್ಗೆ 9-30 ರಿಂದ 2-30 ಗಂಟೆಯವರೆಗೆ, ಸಂಜೆ 5-30 ರಿಂದ 8-00ಗಂಟೆಯವರೆಗೆ
ಭೇಟಿಗಾಗಿ : 08172 - 262434, 8951289047
ಸಿರಿ ಪಾಲಿಕ್ಲಿನಿಕ್ ಮತ್ತು ಡಯಾಬಿಟಿಸ್ ಕೇರ್ ಕ್ಲಿನಿಕ್
ಸತ್ಯಂ ಆರ್ಕೆಡ್, ದೇನಾ ಬ್ಯಾಂಕ್ ಬಿಲ್ಡಿಂಗ್, ಮೋರ್ ಶಾಪ್
ಸಮೀಪ, ಸಹ್ಯಾದ್ರಿ ಸರ್ಕಲ್, ಸಾಲಗಾಮೆ ರಸ್ತೆ, ಹಾಸನ-573201

ಉತ್ಸವಗಳಲ್ಲಿ ಮುಳುಗಿ ಹೋದ ಸರ್ಕಾರಿ ಇಲಾಖೆಗಳು

ಹಾಸನ : ಶ್ರವಣಬೆಳಗೊಳ ಮಹಾ ಮಸ್ತಕಾಭಿಷೇಕ, ಹಾಸನಾಂಬ ಜಾತ್ರೆ, ಸಂತರ ಜಯಂತಿಗಳು ಹೀಗೆ ಹಲವು ಆಚರಣೆಗಳಲ್ಲಿ ಸರ್ಕಾರಿ ಅಧಿಕಾರಿಗಳು ತೊಡಗಿಸಿಕೊಳ್ಳಬೇಕಾದ ಒತ್ತಡದಲ್ಲಿರುವುದರಿಂದ ಮುಖ್ಯವಾಗಿ ಕಂದಾಯ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಲ್ಲಿ ಜನರ ಕೆಲಸಗಳೇ ಆಗುತ್ತಿಲ್ಲ ಎಂಬ ದೂರುಗಳು ವ್ಯಾಪಕವಾಗಿವೆ.

ಸಾಲು ಸಾಲು ಉತ್ಸವಗಳು ಬರುತ್ತಿರುವುದನ್ನು ನೋಡಿದರೆ ಉತ್ಸವಗಳ ಏರ್ಪಾಡಿಗಾಗಿಯೇ ಒಂದು ಪ್ರತ್ಯೇಕ ಇಲಾಖೆಯನ್ನೇ ರಚಿಸಬೇಕಾದೀತು. ರಾಷ್ಟ್ರಪತಿ, ಉಪ ರಾಷ್ಟ್ರಪತಿ, ಪ್ರಧಾನಿಯಂತಹ ಅತಿ ಗಣ್ಯರು ಬಂದರಂತೂ ಮುಗಿದೇ ಹೋಯಿತು, ಕಂದಾಯ ಇಲಾಖೆಯ ಉಪ ವಿಭಾಗಾಧಿಕಾರಿಗಳು, ತಹಸೀಲ್ದಾರರು ಈ ಉತ್ಸವಗಳಲ್ಲೇ ಮುಳುಗಿ ಹೋಗುವುದರಿಂದ ಮೂಲ ಇಲಾಖೆಯ ಕೆಲಸ ಮಾಡುವವರು ಯಾರು? ಹಿರಿಯ ಅಧಿಕಾರಿಗಳೇ ಬೇರೆ ಕಡೆ ಹೋಗುವುದರಿಂದ ಕೆಳಗಿನ ನೌಕರರಿಗೆ ಹೇಳುವವರು ಕೇಳುವವರು ಯಾರೂ ಇಲ್ಲದಂತಾಗುತ್ತದೆ.

ಪ್ರಮುಖವಾದ ಕಡತಗಳಿಗೆ ನಿರ್ಣಾಯಕ ಸ್ಥಾನದಲ್ಲಿರುವ ಅಧಿಕಾರಿಗಳ ಸಹಿ ಬೇಕಾಗುವುದರಿಂದ ತಿಂಗಳುಗಟ್ಟಲೇ ಕಡತಗಳು ಮುಂದೆ ಸಾಗುವುದೇ ಇಲ್ಲ. ಸಣ್ಣಪುಟ್ಟ ರೈತರ ಸ್ಥಿತಿಯಂತೂ ಚಿಂತಾಜನಕ. ತಮ್ಮ ಆಸ್ತಿಗೆ ಸಂಬಂಧಪಟ್ಟಂತೆ ಸಣ್ಣ ವ್ಯಾಜ್ಯ, ತಕರಾರು ಇದ್ದರಂತೂ ದೇವರೇ ಗತಿ. ಯಾವ ತಾಲ್ಲೂಕು ಕಛೇರಿಗಳನ್ನು ನೋಡಿದರೂ ಜನರಿಂದ ತುಂಬಿ ಹೋಗಿರುತ್ತದೆ. ದೂರದ ಹಳ್ಳಿಗಳಿಂದ ಹಣ ಖರ್ಚು ಮಾಡಿಕೊಂಡು ಬರುವ ಜನರು ಹತಾಶೆಯಿಂದ ವಾಪಸ್ಸು ಹೋಗುವುದು ಸಾಮಾನ್ಯ ಸಂಗತಿ ಆಗಿ ಬಿಟ್ಟಿದೆ.

ಮಗಳ ಮದುವೆ ನಿಶ್ಚಯ ಆಯಿತೆಂದರೆ ಯಾವುದಾದರೂ ಆಸ್ತಿ ಮಾರಲೇಬೇಕಾದ ಒತ್ತಡದಲ್ಲಿ ಬಹಳ ಜನ ಇರುತ್ತಾರೆ. ಆಸ್ತಿ ಮಾರಬೇಕೆಂದರೆ ದಾಖಲಾತಿಗಳು ಶುದ್ಧವಾಗಿರಬೇಕು. ದಾಖಲೆಗಳನ್ನು ಸರಿಪಡಿಸಿಕೊಳ್ಳುವುದು ಎಷ್ಟು ಕಷ್ಟ ಎಂಬುದು ಸರ್ಕಾರಿ ಕಛೇರಿಗಳಿಗೆ ಹೋಗಿ ಬಂದವರಿಗೆ ಮಾತ್ರ ಗೊತ್ತು. ಇನ್ನು ಹೆಚ್ಚಿನ ವಿದ್ಯಾಭ್ಯಾಸ, ದೊಡ್ಡ ಕಾಯಿಲೆಗಳ ಚಿಕಿತ್ಸೆಗೂ ಅಪಾರ ಹಣ ಬೇಕಾದಾಗ ಜನರು ಆಸ್ತಿ ಮಾರಲು ಯೋಚಿಸುತ್ತಾರೆ. ಆಸ್ತಿ ಮಾರಾಟ ಆಗದಿದ್ದಾಗ ಮೀಟರ್ ಬಡ್ಡಿಯವರ ಮೊರೆ ಹೋಗುತ್ತಾರೆ. ಒಮ್ಮೆ ಬಡ್ಡಿ ವ್ಯವಹಾರದವರ ಬಳಿ ಸಿಕ್ಕಿ ಬಿದ್ದರೆ ಅವರ ಕತೆ ಮುಗಿಯಿತೆಂದೇ ಅರ್ಥ.

ಒಂದು ಪಹಣಿ, ಖಾತೆ ಬದಲಾವಣೆ ಕೆಲಸ ವರ್ಷಗಟ್ಟಲೇ ಆಗುವುದೇ ಇಲ್ಲ. ಸರ್ವೆ ಕೆಲಸಕ್ಕಂತೂ ಜನರು ತಿಂಗಳುಗಟ್ಟಲೆ ಅಧಿಕಾರಿಗಳನ್ನು ಬೈದರೂ ಪ್ರಯೋಜನ ಇಲ್ಲ. ಇಷ್ಟೊಂದು ಕೆಲಸದ ಒತ್ತಡ ಇದ್ದರೆ ಅವರು ತಾನೆ ಏನು ಮಾಡಲು ಸಾಧ್ಯ?

ಪೊಲೀಸ್ ಇಲಾಖೆಯ ಕತೆಯೂ ಅದೇನೆ. ತಮ್ಮ ಸಂಕಷ್ಟಗಳನ್ನು ಹೇಳಿಕೊಳ್ಳಲು ಅಧಿಕಾರಿಗಳೇ ಕಛೇರಿಯಲ್ಲಿ ಸಿಗುವುದಿಲ್ಲ. ಹಾಸನ ನಗರದ ಟ್ರಾಫಿಕ್ ವ್ಯವಸ್ಥೆಯೇ ಒಂದು ಸಣ್ಣ ಉದಾಹರಣೆ. ಇಲ್ಲಿನ ಸಾರಿಗೆ ವ್ಯವಸ್ಥೆ ಹೇಗೆ ನಡೆದಿದೆ ಎಂದು ಯಾರಿಗೂ ಗೊತ್ತಿಲ್ಲ. ಪೊಲೀಸರು ಹೆಲ್ಮೆಟ್ ಹಾಕದವರಿಂದ ದಂಡ ವಸೂಲಿಯಲ್ಲೇ ಹೆಚ್ಚು ಮಗ್ನರಾಗಿರುತ್ತಾರೆ.

ಜಿಲ್ಲಾಧಿಕಾರಿಗಳು ಹಾಗೂ ಪೊಲೀಸ್ ಮುಖ್ಯಾಧಿಕಾರಿಗಳು ಏನೇ ಒತ್ತಡಗಳಿದ್ದರೂ ಇಲಾಖೆಯ ಕೆಲಸಗಳ ಬಗ್ಗೆ ಗಮನ ಹರಿಸಲೇಬೇಕು. ಕೆಲಸಗಳೇ ಆಗದಿದ್ದರೆ ಜನರು ಯಾರ ಬಳಿ ಹೇಳಿಕೊಳ್ಳಬೇಕು?

Sthree Collections
Showcasing Mesmerizing Scoop of
Kanchivaram,
Banaras,
Tussar Silk Sarees,
Exquisite Kurtis &
Salwars
from Chennai for this Wedding Season
at
Place :- Adichunchanagiri Mahila Samaaj, Ravindranagar, Hassan
Date: Friday 9th Feb 2018   Timings: 10am to 8pm
Ramya Gowda & Anuradha Bhat

ಹೃತ್ಪೂರ್ವಕ ಅಭಿನಂದನೆಗಳು

ಬಿ.ಜೆ.ಯೋಗೀಶ್ ಗೌಡ

ಬಿಹಾರದಲ್ಲಿ ಇತ್ತೀಚೆಗೆ ನಡೆದ ಬಾಲಕರ ರಾಷ್ಟ್ರೀಯ ನೆಟ್‌ಬಾಲ್ ಚಾಂಪಿಯನ್‌ಶಿಪ್‌ನಲ್ಲಿ ದ್ವಿತೀಯ ಸ್ಥಾನ ಪಡೆದು ಬೆಳ್ಳಿ ಪದಕ ತನ್ನದಾಗಿಸಿಕೊಂಡ, ಕರ್ನಾಟಕ ತಂಡದ ರಾಷ್ಟ್ರೀಯ ನೆಟ್‌ಬಾಲ್ ಚಾಂಪಿಯನ್‌ಶಿಪ್ ನಾಯಕತ್ವ ವಹಿಸಿ ರಾಜ್ಯಕ್ಕೆ ಮತ್ತು ಹಾಸನ ಜಿಲ್ಲೆಗೆ ಕೀರ್ತಿ ತಂದ, ಜಿಲ್ಲಾ ಹೆಚ್.ಡಿ.ಸಿ.ಸಿ. ಬ್ಯಾಂಕ್ ನಿರ್ದೇಶಕ ಮತ್ತು ಎ.ಪಿ.ಎಂ.ಸಿ. ನಿರ್ದೇಶಕರಾದ ಬಿದರಿಕೆರೆಯ ಶ್ರೀ ಜಯರಾಂ ಮತ್ತು ಶ್ರೀಮತಿ ಸುಮತಿ ಜಯರಾಂ ಅವರ ಪುತ್ರ

ಶ್ರೀ ಬಿ.ಜೆ.ಯೋಗೀಶ್ ಗೌಡ

ಅವರಿಗೆ ಹೃತ್ಪೂರ್ವಕ ಅಭಿನಂದನೆ ಸಲ್ಲಿಸುತ್ತಾ, ಅವರು ಕ್ರೀಡಾ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡಲಿ ಎಂದು ತುಂಬು ಹೃದಯದಿಂದ ಹಾರೈಸುತ್ತೇವೆ.


ಪಟೇಲ್ ಶಿವರಾಂ
ವಿಧಾನ ಪರಿಷತ್
ಮಾಜಿ ಸದಸ್ಯರು


ಸ್ವಾಮಿಗೌಡ
ಜಿ.ಪಂ. ಮಾಜಿ
ಉಪಾಧ್ಯಕ್ಷರು


ಡಿ.ಎನ್.ಮಂಜುನಾಥ್
ಎ.ಪಿ.ಎಂ.ಸಿ.
ಮಾಜಿ ಅಧ್ಯಕ್ಷರು


ಭಾಗೇಶ್
ಕೃಷಿ ಪತ್ತಿನ ಸಹಕಾರ
ಸಂಘದ ಮಾಜಿ ಅಧ್ಯಕ್ಷರು


ಆನಂದ್ ಕುಮಾರ್, ಸಂಜೀವಿನಿ
ಮೆಡ್ ಪ್ಲಸ್, ಚುಂಚನಗಿರಿ
ಕಲ್ಯಾಣ ಮಂಟಪ, ಹಾಸನ.


ಬಿ.ರವಿ
ಗುತ್ತಿಗೆದಾರರು,
ಹಾಸನ.

ರಘು, ಸತ್ಯವಂಗಲ
ಗ್ರಾಮ ಪಂಚಾಯಿತಿ
ಮಾಜಿ ಸದಸ್ಯರು


ರಂಗನಾಥ್, ಸಹಾಯಕ
ನಿರ್ದೇಶಕರು, ಕ್ಷೀರಭಾಗ್ಯ
ಯೋಜನೆ, ಜಿ.ಪಂ., ಹಾಸನ.